ದಿನಾಂಕಃ 28.07.2025 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ.ಪಿ.ಯು. ವಕೀಲರಿಂದಃ**

1. ದಾವಾ ಸ್ವತ್ತಿನ ದಕ್ಷಿಣಕ್ಕೆ ಸ.ನಂ.139/1 ರಲ್ಲಿ 4 ಎಕರೆ 36 ಗುಂಟೆ ಮತ್ತು ಸ.ನಂ.139/2 ರಲ್ಲಿ 38 ಗುಂಟೆ ಪ್ರತಿವಾದಿಗೆ ಸೇರಿದ ಜಮೀನು ಎಂದರೆ ಸರಿ. ದಾವೆ ಸಲ್ಲಿಸಿದ ನಂತರ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುತ್ತಾರ ಎಂದರೆ ಇಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕಿರುವ ಸ್ವತ್ತಿನ ಹಿಂದಿನ ಮಾಲೀಕರು ಹೆಚ್.ಎನ್.ಆರ್. ಕಂಠಿ ಎಂದರೆ ಸರಿ. 2018 ರಲ್ಲಿ ಕಂಠಿಯವರಿಂದ ಪ್ರತಿವಾದಿಯು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಅವರ ಸ್ವತ್ತಿಗೆ ಕಾಂಪೌಂಡ್ ನಿರ್ಮಿಸುವ ಸಮಯದಲ್ಲಿ ನನ್ನ ತಾಯಿ ಒ.ಎಸ್.194/2018 ಅನ್ನು ಕಂಠಿರವರ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ಸ್ವತ್ತು ಮತ್ತು ಪ್ರತಿವಾದಿಯ ಸ್ವತ್ತಿನ ನಡುವೆ ಬದು ಇದ್ದು ಅದರ ಮೇಲೆ ಕಾಂಪೌಂಡ್ ನಿರ್ಮಿಸಿದರೆ ನಮ್ಮ ವ್ಯವಸಾಯಕ್ಕೆ ತೊಂದರೆ ಆಗುತ್ತದೆ ಎಂದು ತಿಳಿಸಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತಂತಿ ಬೇಲಿ ನಿರ್ಮಿಸಲು ತಿಳಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಒ.ಎಸ್.194/2018 ರಲ್ಲಿ ನಾನು ನನ್ನ ತಾಯಿಯ ಪರವಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ

ಒಂದು ದಾಖಲಾತಿ ತೋರಿಸಲಾಗಿ ನಾನು ನೀಡಿದ ಸಾಕ್ಷಿ ಮತ್ತು ದಾವಾ ಪ್ರತಿ ಎಂದರೆ ಸರಿ. ಅದನ್ನು ನಿಡಿ 1 ಮತ್ತು 2 ಎಂದು ಗುರುತಿಸಲಾಯಿತು. ನನ್ನ ಮತ್ತು ಪ್ರತಿವಾದಿಯ ನಡುವೆ ಬೌಂಡರಿಗೆ ಸಂಬಂಧಪಟ್ಟಂತೆ ತಕರಾರು ಇದೆಯೇ ಎಂದರೆ ಇದೆ. ದಾವಾ ಸ್ವತ್ತನ್ನು ಪ್ರತಿವಾದಿ ಒತ್ತುವರಿ ಮಾಡಿರುತ್ತಾರ ಎಂದರೆ ಇಲ್ಲ. ಒ.ಎಸ್.ನಂ.194/2018 ವಾದಿಯ ಪರವಾಗಿ ಕಮಿಷನರ್ ನೇಮಕಕ್ಕೆ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

2. ದಾವಾ ಸ್ವತ್ತಿನ ಗಡಿಯನ್ನು ಗುರುತಿಸಿಕೊಂಡಿದ್ದೀರ ಎಂದರೆ ಗುರುತಿಸಿಕೊಂಡಿರುತ್ತೇವೆ. ಸದರಿ ಗಡಿಯನ್ನು ಗುರುತಿಸಿರುವ ಬದುವನ್ನು ಪ್ರತಿವಾದಿ ತೆರವುಗೊಳಿಸಿರುತ್ತಾರೆ. ಪ್ರತಿವಾದಿ ತೆರವುಗೊಳಿಸಿರುತ್ತಾರೆ ಎಂದು ದಾಖಲಾತಿ ಹಾಜರುಪಡಿಸಿದ್ದೀರ ಎಂದರೆ ಇಲ್ಲ. ಒ.ಎಸ್.194/18 ವಜಾ ಆಗಿರುತ್ತದೆ ಎಂದರೆ ಸರಿ. ಒ.ಎಸ್.ನಂ.194/18 ರಲ್ಲಿ ಕೇಳಿರುವ ಪರಿಹಾರವನ್ನೇ ಈ ದಾವೆಯಲ್ಲಿ ಕೇಳಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಪ್ರತಿವಾದಿ ಬೇಲಿ ಹಾಕಿರುತ್ತಾರ ಎಂದರೆ ಇಲ್ಲ. ಒ.ಎಸ್.194/18 ರಲ್ಲಿರುವ ಸ್ವತ್ತು ಮತ್ತು ಈ ದಾವೆಯಲ್ಲಿರುವ ಸ್ವತ್ತು ಒಂದೇ ಎಂದರೆ ಸರಿ. ಒಂದೇ ವ್ಯಾಜ್ಯ ಕಾರಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ದಾವೆ ಇತ್ಯರ್ಥವಾಗಿರುವ ಕಾರಣ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

3. ನಾನು ಗ್ರಾಮ ಪಂಚಾಯಿತಿಯಲ್ಲಿ ಎಸ್.ಡಿ.ಎ. ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ತಕರಾರು ಇಲ್ಲದಿದ್ದರೂ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

ಪ್ರತಿವಾದಿಯ ಸ್ವತ್ತನ್ನು ನಾನು ಕೇಳಿದ ಬೆಲೆಗೆ ಕಂಠಿರವರು ನಮಗೆ ಮಾರಾಟ ಮಾಡದ ಕಾರಣ ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.